O.S. No. 33-2014
D.W. -4

**<u>ದಿನಾಂಕಃ 19-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಮುಂದುವರೆದ ಪಾಟೀ ಸವಾಲುಃ- ಶ್ರೀ ಆಶೋಕ., ಮಾನ್ಯ ವಕೀಲರಿಂದ 5 ಮತ್ತು 6 ನೇ ವಾದಿಗಳ ಪರವಾಗಿಃ-</u>***

ನನ್ನ ಮಾವ ಶ್ರೀ ಸಿದ್ದಪ್ಪ ಇವರು ತೀರಿಕೊಂಡು ಈಗ 8-9 ವರ್ಷಗಳಾಗಿರುತ್ತವೆ. ಸಾಕ್ಷಿಗೆ ಈಗ ನಿಮ್ಮ ಸದರಿ ಮಾವ ಅವರ ಜೀವಂತ ಇರುವವರೆಗೂ ಸದರಿ ಗ್ರಾಮದಲ್ಲಿದ್ದ ತಮ್ಮ ಹೊಲ ಮನೆಗಳನ್ನು ನೋಡಿ ಕೊಂಡು ಹೋಗುತ್ತಿದ್ದರು ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಾವ ಸ್ವತ್ತುಗಳಿಂದ ಬಂದಂತಹ ಆದಾಯವನ್ನು ನಿಮ್ಮ ಮಾವನವರೇ ಇಟ್ಟುಕೊಳ್ಳುತ್ತಿದ್ದರು ಎಂದು ಹೇಳಿದ್ದಕ್ಕೆ ಸಾಕ್ಷಿ ತಮ್ಮ ಮಾವ ಹಾಗೂ ಅವರ ದೊಡ್ಡ ಮಗ ಎಂದು ಹೇಳುತ್ತಾರೆ. ನಾನು ಜಾಬ್ ಮಾಡುತ್ತಿದ್ದೇನೆ ಎಂದು ತೋರಿಸಲು ಈ ನ್ಯಾಯಾಲಯಕ್ಕೆ ನೇಮಕಾತಿ ಪತ್ರವನ್ನು ಸಲ್ಲಿಸಿರುತ್ತೇನೆ. ನನ್ನ ಯಜಮಾನರು ಕ್ಲಾಸ್-1 ಕಾಂಟ್ರಾಕ್ಟರ ಆಗಿದ್ದರು ಎಂದು ತೋರಿಸಲು ನಾನು ಈ ನ್ಯಾಯಾಲಯಕ್ಕೆ ದಾಖಲೆಯನ್ನು ಒದಗಿಸಿರುತ್ತೇನೆ. ನನಗೆ ದಾವ ಸ್ವತ್ತುಗಳ ಚೆಕ್ ಬಂದಿ ಹೇಳಲು ಬರುವುದಿಲ್ಲ. ದಾವ ಸರ್ವೆ ನಂಬರ 18 ಇದು 6 ಎಕರೆ ಇರುತ್ತದೆ. ಸಾಕ್ಷಿಗೆ ಈಗ ನೀವು ಸದರಿ ಸರ್ವೆ ನಂಬರ 18 ರ ಖರೀದಿ ಪತ್ರವನ್ನು ನೋಡಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಖರೀದಿ ಪತ್ರ ಯಾರ ಹೆಸರಿನಲ್ಲಿ ಇರುತ್ತದೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಮ್ಮ ಮನೆಯವರಿಗೆ ಗೊತ್ತಿದ್ದು ತಮಗೆ ಗೊತ್ತಿರುವುದಿಲ್ಲ

ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಸರ್ವೆ ನಂಬರ 18 ರ ಖರೀದಿ ಪತ್ರ ನಿಮ್ಮ ಸದರಿ ಮಾವನವರ ಹೆಸರಿನಲ್ಲಿ ಇರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಸರ್ವೆ ನಂಬರ 18 ನ್ನು ವಾದಿ , 2 ರಿಂದ 5 ನೇ ಪ್ರತಿವಾದಿ ಗಳು ಸದರಿ ಕಿರಾಣಿ ಅಂಗಡಿ ಹಾಗೂ ದಾವ ಸ್ವತ್ತು ಅನುಸೂಚಿ -(ಎ) ದ ಐಟಂ ನಂಬರ 1 ರ ಸ್ವತ್ತಿನಿಂದ ಬಂದಂಹತ ಆದಾಯದಿಂದ ಖರೀದಿ ಮಾಡಲಾಗಿರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಯಲ್ಲ ಎಂದು ಹೇಳುತ್ತಾರೆ.

ದಾವ ಸರ್ವೆ ನಂಬರ 19 ಇದು 6 ಎಕರೆ ಇರುತ್ತದೆ. ಸಾಕ್ಷಿಗೆ ಈಗ ಸದರಿ ಸರ್ವೆ ನಂಬರ 19 ಯಾವ ರೀತಿ ಬಂದಿರುತ್ತದೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಮ್ಮ ಯಜಮಾನರು ಕ್ಲಾಸ್ 1 ಕಾಂಟ್ರಾಕ್ಟರ ಆಗಿದ್ದರು ಹಾಗೂ ಅವರು ತಮ್ಮ ದುಡಿಮೆಯಿಂದ ಬಂದಂತಹ ಹಣದಿಂದ ಸದರಿ ಸ್ವತ್ತನ್ನು ತಮ್ಮ ತಂದೆಯವರ ಹೆಸರಿನಲ್ಲಿ ಖರೀದಿ ಮಾಡಿರುವುದಾಗಿ ಹೇಳುತ್ತಾರೆ. ಸರ್ವೆ ನಂಬರ 19 ನ್ನು ನನ್ನ ಯಜಮಾನರು ಶ್ರೀಮತಿ ಪಾತಮ್ಮ ಎನ್ನುವವರಿಂದ ಖರೀದಿ ಮಾಡಿರುತ್ತಾರೆ. ನನ್ನ ಯಜಮಾನರು ಯಾವ ವರ್ಷ ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನಾನು ಸದರಿ ಖರೀದಿ ಪತ್ರವನ್ನು ನೋಡಿರುವುದಿಲ್ಲ. ಸಾಕ್ಷಿಗೆ ಈಗ ನಿಮ್ಮ ಸದರಿ ಯಜಮಾನರು ಸದರಿ ಸರ್ವೆ ನಂಬರ 19 ನ್ನು ಶ್ರೀಮತಿ ಶರೀಫುನ್ನೀಸಾ ಎನ್ನುವವರಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ ಕಿರಾಣಿ ಅಂಗಡಿ ಹಾಗೂ ದಾವ ಅನುಸೂಚಿ -(ಎ) ದ ಐಟಂ ನಂಬರ 1 ಸ್ವತ್ತಿನಿಂದ ಬಂದಂತಹ ಆದಾಯದಿಂದ ಸದರಿ ಸರ್ವೆ ನಂಬರ 19 ನ್ನು ನನ್ನ ಮಾವನವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸನ್ 1995-96 ರಲ್ಲಿ

ನನ್ನ ಯಜಮಾನರು ಕ್ಲಾಸ -1 ಕಾಂಟ್ರಾಕ್ಟರ ಎಂದು ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ನನ್ನ ಯಜಮಾನರಿಗೆ ಸನ್ 1995-96 ರಲ್ಲಿ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ 191/2 ಇದು ಸುಲ್ತಾನಪುರ ಗ್ರಾಮದಲ್ಲಿ ಇರುತ್ತದೆ. ಸದರಿ ಜಮೀನಿನ ವಿಸ್ತೀರ್ಣ 5 ವರೆ ಎಕರೆ. ಸದರಿ ಜಮೀನಿನ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಜಮೀನು ಯಾರ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನಿನನ್ನು ಒಬ್ಬ ಶ್ರೀ ತಿರುಪತಿ ಎನ್ನುವವರಿಂದ ಖರೀದಿ ಮಾಡಲಾಗಿರುತ್ತದೆ. ಸದರಿ ಜಮೀನನ್ನು ಯಾವ ವರ್ಷ ಖರೀದಿ ಮಾಡಲಾಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸನ್ 1988 ರಲ್ಲಿ ನನ್ನ ಸದರಿ ಮಾವ ಸದರಿ ಸರ್ವೆ ನಂಬರ 191/2 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಹಾಗೂ 2 ರಿಂದ 5 ನೇ ಪ್ರತಿವಾದಿಗಳು ಸದರಿ ಕಿರಾಣಿ ಅಂಗಡಿಯಿಂದ ಬಂದಂತಹ ಆದಾಯದಿಂದ ಹಾಗೂ ಪಿತ್ರಾರ್ಜಿತ ಸ್ವತ್ತುಗಳಿಂದ ಬಂದಂತಹ ಆದಾಯದಿಂದ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂಬರ 416/ಎ ಮತ್ತು 419/ಬಿ ಇವುಗಳ ವಿಸ್ತೀರ್ಣ ಎಷ್ಟಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ನಾನು ಸದರಿ ಎರಡು ಸರ್ವೆ ನಂಬರಗಳ ಖರೀದಿ ಪತ್ರಗಳನ್ನು ನೋಡಿರುತ್ತೇನೆ, ಸದರಿ ಖರೀದಿ ಪತ್ರದ ದಿನಾಂಕ ಹಾಗೂ ದಸ್ತಾವೇಜಿನ ಸಂಖ್ಯೆ ಹೇಳಲು ನನಗೆ ನೆನಪಿರುವುದಿಲ್ಲ. ಸಾಕ್ಷಿಗೆ ಈಗ ಸದರಿ ಎರಡು ಜಮೀನುಗಳನ್ನು ನಿಮ್ಮ ಮಾವನವರು ನಿಮ್ಮ ಯಜಮಾನರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು

ಹೇಳಿದ್ದಕ್ಕೆ ತಮ್ಮ ಯಜಮಾನರೇ ತಮ್ಮ ಮಾವನ ಹೆಸರಿನಲ್ಲಿ ಸದರಿ ಸ್ವತ್ತುಗಳನ್ನು ಖರೀದಿ ಮಾಡಿರುವುದಾಗಿ ಹೇಳುತ್ತಾರೆ. ಸನ್ 1996-97 ಇಲ್ಲಿ ನನ್ನ ಯಜಮಾನರು ಯಾವುದೇ ಆದಾಯವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಎರಡು ಸ್ವತ್ತುಗಳನ್ನು ಸದರಿ ಕಿರಾಣಿ ಅಂಗಡಿ ಹಾಗೂ ಪಿತ್ರಾರ್ಜಿತ ಸ್ವತುಗಳಿಂದ ಬಂದಂತಹ ಆದಾಯದಿಂದ ಖರೀದಿ ಮಾಡಲಾಗಿರುತ್ತವೆ ಎಂದರೆ ಸರಿಯಲ್ಲ.

ಸರ್ವೆ ನಂಬರ 17/3 ಹಾಗೂ 17/4 ಇವುಗಳ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ಎರಡು ಸರ್ವೆ ನಂಬರಗಳ ಖರೀದಿ ಪತ್ರಗಳ ಬಗ್ಗೆ ಗೊತ್ತಿರುವುದಿಲ್ಲ. ಸರ್ವೆ ನಂಬರ 17 ಇದು ಸುಲ್ತಾನಪುರದಲ್ಲಿ ಇರುತ್ತದೆ. ನಮ್ಮ ಊರಿನಲ್ಲಿ ಒಂದು ಬಿದ್ದಂತ ಮನೆ ಇದ್ದು ಅದು ನಮ್ಮ ಮಾವನವರ ಕಡೆಯಿಂದ ಬಂದಿರುತ್ತದೆ ಎಂದರೆ ಸರಿ. ಹೆಚ್. ಆರ್. ಬಿ., ಲೇಔಟನಲ್ಲಿ ನಮ್ಮದು ಒಂದು ಮನೆ ಇದೆ ಎಂದರೆ ಸರಿ. ಸದರಿ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ನಾನು ಸದರಿ ಮನೆಯನ್ನು ಶ್ರೀ ಭಂಡಾರಿ ಎನ್ನುವವರಿಂದ ಖರೀದಿ ಮಾಡಿರುತ್ತೇನೆ. ಸದರಿ ಮನೆಯನ್ನು ಸನ್ 2000 ರಲ್ಲಿ ಖರೀದಿ ಮಾಡಿರುತ್ತೇನೆ.

( ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**